## 11

# ರಕ್ಷಕನನ್ನು ಹುಡುಕುವದು

## ಮತ್ತಾಯ 2:1-13, ಒಂದು ನಿಕಟ ನೋಟ

ಜನರು ತಮಗಾಗಿ ಅನೇಕ ಸಂಗತಿಗಳನ್ನು ಬಯಸುತ್ತಾರೆ: ಕೀರ್ತಿ, ಶುಭ, ಸಂತೋಷ ಆದರೆ ಯೇಸುವಿನ ಪ್ರಕಾರ “ಒಂದೇ ಒಂದು ಸಂಗತಿಯು ಅಗತ್ಯವಿದೆ” (ಲೂಕ 10:42ಎ). ಅದೇನೆಂದರೆ ದೇವರನ್ನು ಹುಡುಕುವದೇ ಪೌಲನು ತನ್ನ ಪರ್ವತ ಪ್ರಸಂಗದಲ್ಲಿ, “ದೇವರು ಎಲ್ಲರಿಗೂ ಜೀವ ಶ್ವಾಸ ಮುಂತಾದೆಲ್ಲವನ್ನು ಕೊಡುತ್ತಾನೆ ಎಂದಿರುವನು” (ಅಪೊಸ್ತಲರ ಕೃತ್ಯಗಳು 17:25-27ಎ). ದಾವೀದನು ಪ್ರಾರ್ಥಿಸಿ, “ದೇವರೇ ನೀನೇ ನನ್ನ ದೇವರು; ನಾನು ನಿನ್ನ ದರ್ಶನವನ್ನು ಕೂತುಹಲದಿಂದ ಎದುರುನೋಡುತ್ತೇನೆ ...” (ಕೀರ್ತನೆ 63:1). ದೇವರನ್ನು ಹುಡುಕಿರಿ ಎಂದು ಮೋಶೆಯು ತನ್ನ ಜನರಿಗೆ ಪ್ರೋತ್ಸಾಹಿಸಿದನು; ನಿಮ್ಮ ದೇವರಾದ ಯೆಹೋವನನ್ನು ಹುಡುಕಿದರೆ ಆತನು ನಿಮಗೆ ಸಿಕ್ಕುವನು (ಧರ್ಮೋಪದೇಶಕಾಂಡ 4:29).[1]

ಪೂರ್ಣ ಹೃದಯದಿಂದ ದೇವರನ್ನು ಹುಡುಕಿದ “ಒಂದು ಗುಂಪಿನ ಕುರಿತು ಇಲ್ಲಿ ಅಧ್ಯಯನ ಮಾಡೋಣ” (2 ಪೂರ್ವಕಾಲವೃತ್ತಾಂತ 15:12). *ಮೂರು* ಜನರು ದೇವರನ್ನು ಹುಡುಕಿದರು ಎಂದು ತಿಳಿಸಿರುವೆನು. ಬೆತ್ಲೆಹೇಮಿಗೆ ಒಂದು ಯೇಸುವನ್ನು ಆರಾಧಿಸಿದ ಮೂಲ ಜೋಯಿಸರ ಬಗ್ಗೆ ನಾನು ಹೇಳುತ್ತಿರುವೆನು ಎಂದು ನೀವು ಊಹಿಸಿರಬಹುದು.

ಇದು ಸರಳವಾದ ಪ್ರಸಂಗವಾಗಿದೆ: ಈ ಮೂವರು ಜೋಯಿಸರು ಯಥಾರ್ಥವಾಗಿ ಯೇಸುವನ್ನು ಹುಡುಕ್ಕಿದ್ದರಿಂದ, ಅವರು ಆತನನ್ನು ಕಂಡುಕೊಂಡರು. ಆತನನ್ನು ಆರಾಧಿಸಿ, ಆಶೀರ್ವಾದ ಪಡಕೊಂಡರು.[2] ನಾವುಗಳು ಸಹ ಅವರ ನಿದರ್ಶನವನ್ನು ಪಾಲಿಸಬೇಕು. ಇದು ಅತಿ ಪರಿಚಯವಿರುವ ಸಂಗತಿಯಾದ್ದರಿಂದ, ನಾನು ಹೆಚ್ಚು ಒತ್ತು ನೀಡುವದಿಲ್ಲ[3] - ಆದರೆ, “ಅವರಂತೆ ನಾವುಗಳು ವಿವೇಕಿಗಳಾಗಿದ್ದೇವೋ?” ಎಂದು ಪ್ರಶಿಸುತ್ತೇನೆ.[4]

## ಅವರು ಯೇಸುವನ್ನು ಹುಡುಕಿದರು (ವಚನಗಳು 1-9, 11, 13)

### ಪಂಡಿತರು (ಜೋಯಿಸರು)

> ಅರಸನಾದ ಹೆರೋದನ ದಿನಗಳಲ್ಲಿ ಯುದಾಯ ಸೀಮೆಯ ಬೆತ್ಲೆಹೇಮ್ ಎಂಬ ಊರಲ್ಲಿ ಯೇಸು ಹುಟ್ಟಿದಾಗ ಮೂಡಣದೇಶದ ಜೋಯಿಸರು ಯೆರೂಸಲೇಮಿಗೆ ಬಂದು-ಯೆಹೂದ್ಯರ ಅರಸನಾಗಿ ಹುಟ್ಟಿದವನು ಎಲ್ಲಿದ್ದಾನೆ? ಆತನನ್ನು ಸೂಚಿಸುವ ನಕ್ಷತ್ರವನ್ನು ನಾವು ಮೂಡಣದೇಶದಲ್ಲಿ ಕಂಡು ಆತನಿಗೆ ಅಡ್ಡ ಬೀಳುವದಕ್ಕೆ ಬಂದೆವು ಅಂದರು (ಮತ್ತಾಯ 2:1, 2).

ಯೇಸುವನ್ನು ಹುಡುಕಿದವರ ಕುರಿತು ನಾವುಗಳು ಗಮನಿಸಬೇಕು. ಮತ್ತಾಯ 2ರಲ್ಲಿನ ಪಂಡಿತರ ಕುರಿತು, ಸಂಪ್ರದಾಯದ ಅನೇಕ ಮಾತುಗಳಿವೆ.[5]

ಅವರನ್ನು “ಜೋಯಿಸರು”[6] ಎನ್ನಲಾಗಿದೆ. “ಜೋಯಿಸರು” ಎಂದರೆ “ಮಾಂತ್ರಿಕ” ಆ ದಿನಗಳಲ್ಲಿ ಜೋಯಿಸರು ಮುಂದೆ ಆಗುವ ಸಂಗತಿಗಳನ್ನು ತಿಳಿಸುವ ವ್ಯಕ್ತಿಗಳಾಗಿ ದ್ದರು. ಆದ್ದರಿಂದ ಅವರನ್ನು “ಪಂಡಿತರು” ಎಂದು ಕರೆಯುತ್ತೇವೆ. ಈ ದಿನಗಳಲ್ಲಿ ಇಂಥ ಜ್ಞಾನವು

ಇರುವದಿಲ್ಲ, ಅವುಗಳು ವಿಜ್ಞಾನ ಹಾಗೂ ಮೂಡನಂಬಿಕೆಗಳಿಂದ ಕೂಡಿದ್ದಾಗಿದೆ. ಆದರೆ ಅವರು ವಿವೇಕದಲ್ಲಿ ನಿಪುಣರಾಗಿದ್ದು, ಅರಸರಿಗೆ ಮಾರ್ಗದರ್ಶನ ನೀಡುತ್ತಿದ್ದರು.

ಅವರು ಮೂರು ಜನರಿದ್ದರು ಎಂದು ಊಹಿಸಲಾಗಿದೆ, ಯಾಕೆಂದರೆ ಅಲ್ಲಿ ಮೂರು ಬಹುಮಾನಗಳನ್ನು ನೀಡಲಾಗಿತ್ತು (ವಚನ 11) - ಆದರೆ, ಮೂರು ಬಹುಮಾನವನ್ನು ಕೆಲವರು ಅಥವಾ ಅನೇಕರು ನೀಡಬಹುದಾಗಿದೆ. "ಜೋಯಿಸರು" ಎಂಬದು ಬಹು ಪದವಾಗಿರುವದರಿಂದ, ಒಂದು ಡಜನ್ ಅಥವಾ ಅಧಿಕ ಜನರೂ ಇರಬಹುದು.[7]

ಅವರನ್ನು ಮೂಢಣ ದೇಶದ ಜೋಯಿಸರು, ಎಂದಿರುವದರಿಂದ, ಅವರು ಯಾವ ದೇಶದವರೆಂದು ತಿಳಿಸಿರವಿಲ್ಲ. ಅವರು ತಂದ ಬಹುಮಾನದ ಮೂಲಕ ಅರೇಬಿಯದವರಿರಬಹುದು. ಪರ್ಶಿಯ ದೇಶದಲ್ಲಿ ಅನೇಕ ಜೋಯಿಸರು ಇದ್ದದರಿಂದ ಅವರು ಪರ್ಶಿಯದವರೇ ಆಗಿರಬಹುದು. ಅವರು ಎಲ್ಲಿಂದ ಪ್ರಯಾಣಿಸಿದರು ಎಂಬ ಅರಿವು ನಮಗಿರುವದಿಲ್ಲ. ಅರೇಬಿಯಾ, ಪರ್ಶಿಯಾ, ಬಾಬಿಲೋನಿಯೂ ಮೆಸಪಟೋಮಿಯ ಪ್ರದೇಶ, ಹಾಗೂ ಭಾರತ ದೇಶಗಳು ಪಾಲಿಸ್ತೇನಿನ ಪೂರ್ವಕ್ಕೆ ಇರುತ್ತವೆ.

ಆದರೆ ಅವರು "ಅನ್ಯರು" ಎಂಬುದು ಖಚಿತವಾಗಿದೆ. ಅವರು ನಮ್ಮ ಅರಸನು ಎಂದು ಹೇಳದೆ, "ಯೆಹೂದ್ಯರ ಅರಸನು" ಎಂದಿರುವರು. ಮಗುವಾದ ಯೇಸುವನ್ನು ದೇವಾಲಯಕ್ಕೆ ಕರಕೊಂಡು ಹೋದಾಗ, "ಸಿಮೆಯೋನನು ಆತನು ಅನ್ಯ ದೇಶದವರಿಗೆ ಜ್ಞಾನೋದಯದ ಬೆಳಕು" ಅಂದನು (ಲೂಕ 2:32).[8] ಈ ಜೋಯಿಸರ ಕಥೆಯಿಂದ, ಯೇಸುವಿನ ಜನನವು ಸಾರ್ವತ್ರಿಕವಾದದ್ದು ಎಂದು ತಿಳಿದು ಬರುತ್ತದೆ. ಯೇಸು ಇಸ್ರಾಯೇಲ್ಯರಿಗೆ ಮಾತ್ರ ರಕ್ಷಕನಾಗಿರದೆ, "ಆತನು ಲೋಕದ ರಕ್ಷಕನಾಗಿರುವನು" (ಯೋಹಾನ 4:42).

ಅವರ ಬಗ್ಗೆ ಹೆಚ್ಚು ವಿವರಗಳು ಲಭ್ಯವಿರದಿದ್ದರೂ, ಅವರ ವಿಶೇಷ ಗುಣ ಲಕ್ಷಣಗಳನ್ನು ಮಾತ್ರ ಗಮನಿಸಬಹುದಾಗಿದೆ. ಅವರು "ಯೆಹೂದ್ಯರ ಅರಸನನ್ನು ಹುಡಕುವವರಾಗಿದ್ದರು." ಅವರು ಅನೇಕ ಕಾಲದಿಂದ ಜ್ಞಾನದ ಅಧ್ಯಯನ ಮಾಡಿದ್ದರಿಂದ ವಿವೇಕಿಗಳಾಗದದೆ, ಅವರು ಸತ್ಯದ ಪರಿಶೋಧನೆ ಮಾಡಿದ್ದರಿಂದ ವಿವೇಕಿಗಳಾದರು. ನೀನು ಅತಿ ವಿವೇಕಿಯಾಗದೆ ಇರಬಹುದು, ಆದರೆ ನೀನು "ರಾಜಾಧಿರಾಜನು, ಕರ್ತಾದಿ ಕರ್ತನನ್ನು" ಹುಡುಕುವದಾದರೆ (ಪ್ರಕಟನೆ 19:16), ನೀನು ವಿವೇಕಿಯೇ!

**ಧ್ಯೇಯ**

ಈ ಜೋಯಿಸರು ಕಠಿಣವಾದ ಪ್ರಯಾಣ ಮಾಡಿ ಪಾಲಿಸ್ತೆನಿಗೆ ಏಕೆ ಹೋದರು? ಅವರು ವ್ಯಾಪಾರಿಗಳಾಗಿ ಬಂದರೆ? ತಮ್ಮ ಸಗಟನ್ನು ಮಾರಲು ಬಂದರೆ? ಇಲ್ಲ. ಅವರು ಮೆಡಿಟರೇನಿಯನ್ ಸಮುದ್ರದಲ್ಲಿ ಈಜಿ, ಮೃತ ಸಮುದ್ರದಲ್ಲಿ ತೇಲುವ ಇಚ್ಛೆಯಿಂದ ಪ್ರವಾಸವಾಗಿ ಬಂದರೆ? ಇಲ್ಲ. ಹೆರೋದನ ಸಂಗಡ ರಾಜ ಶಾಂತಿಯನ್ನು ಮೊದಲು ರಾಯಭಾರಿಗಳಾಗಿ ಬಂದರೇ? ಇಲ್ಲ. ಅವರು ಯೆರೂಸಲೇಮಿಗೆ ಬಂದ ತಕ್ಷಣ: ಯೆಹೂದ್ಯರ ಅರಸನಾಗಿ ಹುಟ್ಟಿದವನು ಎಲ್ಲಿದ್ದಾನೆ? ಎಂದು ಕೇಳಿದರು (ಮತ್ತಾಯ 2:2ಎ). ಅವರು "ಮೆಸ್ಸೀಯನನ್ನು" ಕಂಡುಕೊಳ್ಳುವ ಉದ್ದೇಶದಿಂದ ಪಾಲಿಸ್ತೇನಿಗೆ ಬಂದರು.

ಆದರೆ, "ಆತನನ್ನು ಅವರು *ಏಕೆ* ಕಂಡುಕೊಂಡರು?" (ವಚನ 2ಬಿ; ಒತ್ತಿ ಹೇಳಿದ್ದು ನನ್ನದು). ಆತನು ಕೇವಲ "ಯೆಹೂದ್ಯರ ಅರಸನಾಗಿರದೆ"; ಆತನು ಅವರ ಅರಸನೂ ಆಗಿದ್ದರಿಂದ, "... ಆತನನ್ನು *ಆರಾಧಿಸಲು* ಬಂದಿದ್ದರು" (ವಚನ 2ಬಿ; ಒತ್ತಿ ಹೇಳಿದ್ದು ನನ್ನದು). ಆತನನ್ನು ಆರಾಧಿಸುವದಕ್ಕಾಗಿ ನೂರಾರು; ಸಾವಿರಾರು ಮೈಲಿಗಳ ಪ್ರಯಾಣ ಮಾಡಿ ಬಂದಿದ್ದರು.

ನಾವುಗಳು ಸಹ ಜೋಯಿಸರಂತೆ ವಿವೇಕಿಗಳಾದರೆ, ಯೇಸುವನ್ನು ಕಂಡುಕೊಳ್ಳುವ ಸಲುವಾಗಿ, ಯಾವುದೇ ತ್ಯಾಗವನ್ನು ಮಾಡಬಹುದಾಗಿದೆ. "ಆತನು ಪರಲೋಕದಲ್ಲಿ ಸಕಲ

ಆತ್ಮೀಯ ವರಗಳನ್ನು ನಮಗೆ *ಕ್ರಿಸ್ತ ಯೇಸುವಿನಲ್ಲಿ* ಅನುಗ್ರಹಿಸಿದ್ದಾನೆ" (ಎಫೆಸ 1:3; ಒತ್ತಿ ಹೇಳಿದ್ದು ನನ್ನದು). ಇಂಥಹ ಆಶೀರ್ವಾದಗಳೂ ಮತ್ತೆಲ್ಲಿಯೂ ದೊರಕುವದಿಲ್ಲ. ತಮ್ಮ ಜೀವಿತದ ಪ್ರಮುಖ ನನ್ನನ್ನಾಗಿ ದೇವರನ್ನು ಆಯ್ಕೆ ಮಾಡಿಕೊಳ್ಳುವ ಜನರಿಗಾಗಿ ದೇವರು ಹುಡುಕುವವನಾಗಿದ್ದಾನೆ. ಆತನು, "ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ನೀಡುತ್ತಾನೆ" (ಇಬ್ರಿಯ 11:6).

**ವಿಧಾನ**

ಜೋಯಿಸದ ಧ್ಯೆಯದ ಕುರಿತು ಆಲೋಚಿಸುವಾಗ ಅವರು ಈ ಉದ್ದೇಶವನ್ನು ಹೇಗೆ ಈಡೇರಿಸಿದರು? ಎಂದು ಆಲೋಚಿಸಬೇಕು, ಯಾಕೆಂದರೆ ಅವರು ಅನ್ಯರಾಗಿದ್ದರು. ಅತನ ಕುರಿತು ಅರಿತಾಗ, ಆತನನ್ನು ಹೇಗೆ ಕಂಡುಕೊಂಡರು?

ತಮ್ಮ ನೆರೆಹೊರೆಯವರಾದ ಯೆಹೂದ್ಯರ ಮುಖಾಂತರ ಕ್ರಿಸ್ತನ ಬಗ್ಗೆ ಅರಿತ್ತಿದ್ದರು. ಯಾಕೆಂದರೆ ಆ ಸಮಯದಲ್ಲಿ ಯೆಹೂದ್ಯರು ಲೋಕದಲ್ಲೆಲ್ಲಾ ಚದರಿದ್ದರು.[9] ಪರದೇಶಗಳಲ್ಲಿ ಅವರು ತಮ್ಮ ವ್ಯಾಪಾರದ ಸಂಗಡ, ನಂಬಿಕೆಯನ್ನು[10] ಪ್ರಚಾರ ಮಾಡಿದ್ದರು.

ಅವರು "ನಕ್ಷತ್ರವನ್ನು" ನೋಡಿ ಯೇಸುವಿನ ಕುರಿತಾಗಿ ಅರಿತುಕೊಂಡರು. ನಕ್ಷತ್ರಗಳು ಸಹಜವಾದ ಸೂಚನೆಗಳಾಗಿದ್ದವು ಎಂಬುದು ಕೆಲವರ ಅಭಿಪ್ರಾಯ. ಜೋತಿಷ್ಯ ಶಾಸ್ತ್ರದ ಪ್ರಕಾರ, ಅವರು ಅರಿತಿರಬಹುದು. ಜೋತಿಷ್ಯವನ್ನು ಹಳೇ ಒಡಂಬಡಿಕೆಯು ತಿರಸ್ಕರಿಸುತ್ತದೆ (ಯೆಶಾಯ 47:13-15; ದಾನಿಯೇಲ 1:20; 2:27; 4:7; 5:7, 8). ಹಾಗೂ ದೇವ ಜನರು ಇದರ ಆಚಾರವನ್ನು ಮಾಡಲೇ ಬಾರದು (ಯೆರೆಮೀಯ 10:1, 2). ಜೋಯಿಸರು ಜೋತಿಷ್ಯವನ್ನು ಬಲ್ಲವರಾದ್ದರಿಂದ, ಅವರು ಪಾಲಿಸ್ತೇನಿಗೆ ಬಂದರು ಎಂಬದು ಕೆಲವರ ಅನಿಸಿಕೆ. ಜೋಯಿಸರು ಪಶ್ಚಿಮಕ್ಕೆ ಪ್ರಯಾಣ ಮಾಡಿದ ಕುರಿತ ಅನೇಕ ಬರವಣಿಗೆಗಳಿವೆ.[11]

ಅವರು ಹೇಗೆ ಒಂದು ನಿಖರವಾದ ನಕ್ಷತ್ರವನ್ನು ಹಿಂಬಾಲಿಸಿ, ಮೆಸ್ಸೀಯನನ್ನು ಕಂಡುಕೊಂಡ ವಿಚಾರದಲ್ಲಿ ಅನೇಕ ಊಹೆಗಳನ್ನು ಮಾಡಿದ ಕುರಿತು Mcಮೆಕ್‌ಗಾರ್ವೆ ಅನೇಕ ವರ್ಷಗಳ ಹಿಂದೆಯೇ ತಿಳಿಸಿರುವರು. ಆ ಜೋಯಿಸರ ಅಂತಿಮ ನಿರ್ಣಯಗಳ ಕುರಿತು, J. W. Mcಮೆಕ್‌ಗಾರ್ವೆಯವರು, "ಇದೆಲ್ಲವನ್ನು ಒಗ್ಗೂಡಿಸಿದರೂ, ಅವರ ಕುರಿತು ಸ್ಪಷ್ಟತೆಯನ್ನು ಪಡೆಯಲು ಅಸಾಧ್ಯ. ಅವರಿಗೆ ಯಾವ ಸ್ಪೂರ್ತಿಯೂ ಇರುವದಿಲ್ಲ ಎಂದಿರುವರು."[12]

ಹಳೇ ಒಡಂಬಡಿಕೆಯ ಕಾಲದಲ್ಲಿ ದೇವರು ಯೆಹೂದ್ಯರ ಕುರಿತಾಗಿ ಮಾತ್ರ ಚಿಂತಿಸಿದ್ದರು, ಅನ್ಯರನ್ನು ತಿರಸ್ಕರಿಸಲಿಲ್ಲ. ದೇವರು ಅನ್ಯರೊಂದಿಗೆ ಕಾರ್ಯ ನಿರ್ವಹಿಸಿದ್ದರೂ, ಹಳೇ ಒಡಂಬಡಿಕೆಯಲ್ಲಿ, ದೇವರು ಇಸ್ರಾಯೇಲ್ಯರನ್ನು ಒಂದು ವಿಶೇಷವಾದ ಜನಾಂಗವನ್ನಾಗಿ ಆಯ್ಕೆ ಮಾಡಿಕೊಂಡನು, ಅವರ ಮೂಲಕ ತನ್ನ ಮಗನನ್ನು ಲೋಕಕ್ಕೆ ಕಳುಹಿಸಿದನು. ಹೇಗೂ, ದೇವರು ಇಸ್ರಾಯೇಲ್ಯರ ನೆರೆಯವರಾದ ಅನ್ಯರನ್ನು ದೇವರು ಕಡೇಗಣಿಸಿರುವದಿಲ್ಲ. ಉದಾಹರಣೆ ದೇವರು ನೆನವೆಯ ರಕ್ಷಣೆಗಾಗಿ ಯೋನನನ್ನು ಕಳುಹಿಸಿದನು (ಯೋಹಾನ 1:1, 2). ಅನ್ಯನಾದ ಬಿಳಾಮನ ಮೂಲಕ ದೇವರು ಪ್ರವಾದನೆಯನ್ನು ನೀಡಿದ್ದನು: "ಯಾಕೋಬ ವಂಶದವರಲ್ಲಿ ನಕ್ಷತ್ರ ಪ್ರಾಯನೊಬ್ಬನು ಉದಯಿಸಿದ್ದಾನೆ" (ಅರಣ್ಯಕಾಂಡ 24:17). ಜೋಯಿಸರ ನಿದರ್ಶನದಿಂದ, ದೇವರು ಅನ್ಯರಲ್ಲೂ ಆಸಕ್ತಿ ವಹಿಸಿರುವನು ಎಂದು ತೋರಿ ಬರುತ್ತದೆ.

ಜೋಯಿಸರು ಯೇಸುವಿನ ವಿಚಾರವನ್ನು ಅರಿಯುವಂತೆ ದೇವರು ಪ್ರೇರೇಪಿಸಿದನು, ಮತ್ತು ಮೆಸ್ಸೀಯನನ್ನು ಹುಡುಕುವ ದಾರಿಯನ್ನು ಸಹ ದೇವರು ತೋರ್ಪಡಿಸಿದನು. ಜೋಯಿಸರೊಂದಿಗೆ ದೇವರು ಕನಸಿನ ಮೂಲಕ ಮಾತಾಡಿದನು (ಮತ್ತಾಯ 2:12). ಯೆಹೂದ್ಯರ ಅರಸ ಸಮಾಚಾರವನ್ನು ತಿಳಿಸಲು, ದೇವರು ಈ ವಿಧಾನವನ್ನು

ಬಳಸಿರುವನು.

ಮೂಡಣ ದೇಶದವರನ್ನು ದೇವರು ನಡೆಸಿದನು ಎಂಬುದಕ್ಕೆ ನಕ್ಷತ್ರವೆ ಬಂದು ಸಂಕೇತ ವಾಯಿತು. ಜೋಯಿಸರನ್ನು ಮುನ್ನೆಡೆಸಿದ ನಕ್ಷತ್ರದಂತೆ, ಬೇರೇ ಯಾವದೇ ಪುರಾವೆಗಳು ಆಗಸದಲ್ಲಿ ಕಾಣಿಸಲಿಲ್ಲ. ಆ ನಕ್ಷತ್ರವು ಉತ್ತರದಿಂದ, ದಕ್ಷಿಣಕ್ಕೆ ಚಲಿಸಿತು. ಯಾವುದೇ ನಕ್ಷತ್ರವು ಭೂಮಿಯ ನಿಗಧಿತ ಸ್ಥಳದಲ್ಲಿ ನಿಲ್ಲುವದಿಲ್ಲ (ಮತ್ತಾಯ 2:9).

ದೇವರನ್ನು ಹುಡುಕುವವರಿಗಾಗಿ ಒಂದು ನಿಯಮವನ್ನು ನೀಡಬಹುದು. ಜೋಯಿ ಸಲು ಮೆಸ್ಸೀಯನನ್ನು ಕಂಡುಕೊಂಡ ವಿಧಾನದಂತೆ, ನಾವುಗಳು ಸಹ ಇರಬೇಕೆಂದು ದೇವರು ಬಯಸುತ್ತಾನೆ. ನಾವು ರಕ್ಷಕನನ್ನು ಕಂಡುಕೊಳ್ಳಲು ಆಸಕ್ತರಾಗಿದ್ದರೆ, ದೇವರೇ ನಿಮಗೆ ಸಹಾಯಿಸುತ್ತಾನೆ (ಸಮಯಕ್ಕನುಗುಣವಾಗಿ ಹೊರತು ಕೇವಲ ಅದ್ಭುತದಿಂದಲ್ಲ). ಯೇಸುವನ್ನು ಕಂಡು ಕೊಳ್ಳಲು, ನೀವುಗಳು ದೇವರ ಮಾರ್ಗದರ್ಶನವನ್ನು ಬಯಸಬೇಕು.

ಈ ವಿಚಾರಕ್ಕಾಗಿ ಮನುಷ್ಯನು ತನ್ನಲ್ಲೇ *ಭರವಸವಿಡಬಾರದು.* "ಮಾನವರ ಮಾರ್ಗವು ಅವನ ಸ್ವಾಧೀನದಲ್ಲಿಲ್ಲವೆಂದು ನನಗೆ ಗೊತ್ತು, ಮನುಷ್ಯನು ನಡೆದಾಡುತ್ತಾ ಸರಿಯಾದ ಕಡೆಗೆ ತನ್ನ ಹೆಜ್ಜೆಯನ್ನಿಡಲಾರನು" (ಯೆರೆಮೀಯ 10:23). ಕಾರಣವು ಯೋಗ್ಯವಾಗಿದೆ (ಯೆಶಾಯ 1:18), "ಯೆಹೋವನು ಹೀಗನ್ನುತ್ತಾನೆ - ನನ್ನ ಆಲೋಚನೆಗಳು ನಿಮ್ಮ ಆಲೋ ಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ" (ಯೆಶಾಯ 55:8, 9).

ದೇವರ ಮಾರ್ಗವನ್ನು ಒಪ್ಪಿಕೊಂಡ ನಂತರ ತಕ್ಷಣ ನೀವು ಅದನ್ನು - *ಹಿಂಬಾಲಿಸಲೇ ಬೇಕು.* ದೇವರು ತನ್ನ ಸಂದೇಶವನ್ನು ಜೋಯಿಸರಿಗೆ ತಿಳಿಸಿದ ತಕ್ಷಣ, ಅವರು ಹಿಂಜರಿಯದೇ, ಸಾವಿರಾರು ಮೈಲಿಗಳ ಕಠಿಣವಾದ ಪ್ರಯಾಣವನ್ನು ಮಾಡಿದರು.

ಇನ್ನೊಂದು ಅರ್ಹತೆಯನ್ನು ಇಲ್ಲಿ ತಿಳಿಸಲೇಬೇಕು: ದೇವರನ್ನು ಹಿಂಬಾಲಿಸಲು ತಗ್ಗಿದವರಾಗಿರಬೇಕು. ಜೋಯಿಸರು ಗುರಿಯನ್ನು ತಿಳಿಯದವರಾಗಿ, ತನ್ನ ಪ್ರಯಾಣವನ್ನು ಆರಂಭಿಸಿದರು. ಆದರೆ ನಕ್ಷತ್ರವನ್ನು ಹಿಂಬಾಲಿಸಿದರು. ಯೆರೂಸಲೇಮನ್ನು ತಲುಪಿದ ನಂತರ ಎಲ್ಲಿಗೆ ಹೋಗಬೇಕೆಂದು ತಿಳಿಯದಾದರು. ಮಾರ್ಗದರ್ಶನವನ್ನು ಪಡೆಯಲು ಅವರು ನಾಚಿಕೆ ಪಡಲಿಲ್ಲ. (ನಾವುಗಳು ಕೆಲವು ಬಾರಿ ಸಂಕೋಚಪಡುತ್ತೇವೆ.) ದೇವರನ್ನು ಪಡೆಯಲು ದೀನತೆ ಪ್ರಮುಖವಾಗಿದೆ.[13]

ದೇವರು ತನ್ನ ವಾಕ್ಯದ ಮೂಲಕವಾಗಿ ಮಾರ್ಗದರ್ಶನ ನೀಡುತ್ತಾನೆ. ನಕ್ಷತ್ರವು ಅವರನ್ನು ಯೆರೂಸಲೇಮಿನವರೆಗೆ ಮಾತ್ರ ನಡೆಸಿತು. ಈಗ ಅವರಿಗೆ ಗ್ರಂಥಗಳಿಂದ ದೊರಕುವ ಮಾರ್ಗದರ್ಶನದ ಅಗತ್ಯವಿತ್ತು. ಅಲ್ಲಿ ಏನು ನಡೆಯಿತೆಂದು ನೀವು ಬಲ್ಲಿರಿ: "ಅವನು ಯೆಹೂದ್ಯರ ಎಲ್ಲಾ ಮಹಾಯಾಕರನ್ನೂ ಶಾಸ್ತ್ರಿಗಳನ್ನೂ ಕೂಡಿಸಿ - ಕ್ರಿಸ್ತನು ಹುಟ್ಟಬೇಕಾದದ್ದು ಎಲ್ಲಿ ಎಂದು ಅವರನ್ನು ಕೇಳಿದನು" (ಮತ್ತಾಯ 2:4).

> ಯೂದಾಯದ[14] ಬೇತ್ಲೆಹೇಮಿನಲ್ಲಿಯೇ; ಯಾಕಂದರೆ, ಯೆಹೂದ ಸೀಮೆಯ ಬೇತ್ಲೆ ಹೇಮೇ, ಯೆಹೂದದ ಮುಖ್ಯಪಟ್ಟಣಗಳಲ್ಲಿ ನೀನು ಎಷ್ಟು ಮಾತ್ರವೂ ಸಣ್ಣದಲ್ಲ. ಒಬ್ಬ ಅಧಿಪತಿ ನಿನ್ನೊಳಗಿಂದಲೇ ಹೊರಡುವನು, ಆತನು ನನ್ನ ಪ್ರಜೆಯಾದ ಇಸ್ರಾಯೇ ಲ್ಯರನ್ನು ಆಳತಕ್ಕವನು ಎಂಬದಾಗಿ ಪ್ರವಾದಿಯ ಮುಖಾಂತರ ಬರೆದದೆ ಎಂದು ಹೇಳಿ ದರು (ವಚನಗಳು 5, 6).[15]

ಅರಸನ ಪ್ರಶ್ನೆಗೆ ಉತ್ತರವನ್ನು ಗ್ರಂಥದಿಂದ ಅವರು ಪಡೆಯಬೇಕಾಯಿತು. ಮಿಕಾ 5:2.[16]

ಸತ್ಯವೇದವನ್ನು ಹೊರತು ಪಡಿಸಿಯೂ, ದೇವರನ್ನು ಅರಿಯಬಹುದಾಗಿದೆ. ಈ ಲೋಕ ದಲ್ಲಿ ಆತನು ಕ್ರಿಯಾಶೀಲನಾಗಿದ್ದಾನೆ. ಮಳೆಯನ್ನು ಬಿಸಿಲನ್ನು ತರುತ್ತಾನೆ (ಮತ್ತಾಯ

5:45). "ಆಕಾಶವು ದೇವರ ಪ್ರಭಾವವನ್ನು ಪ್ರಚಾರ ಪಡಿಸುತ್ತದೆ. ಗಗನವು ಆತನ ಕೈ ಕೆಲಸವನ್ನು ತಿಳಿಸುತ್ತದೆ" (ಕೀರ್ತನೆ 19:1; KJV). ಕಣ್ಣಿಗೆ ಕಾಣದಿರುವ ಆತನ ಗುಣ ಲಕ್ಷಣಗಳನ್ನು "ಸೃಷ್ಟಿಯಲ್ಲಿ ಗಮನಿಸುತ್ತೇವೆ" (ರೋಮಾಪುರ 1:20). ಹಾಗೂ ಆತನನ್ನು ಹುಡುಕಿ, ಪಡೆಯುವದಕ್ಕಾಗಿ, ನಾವುಗಳು ಗ್ರಂಥಗಳಿಗೆ ಬರಲೇಬೇಕು. ಗ್ರಂಥಗಳ ಕುರಿತಾಗಿ ಯೇಸು, "ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆ, ಅವುಗಳು ನನ್ನ ವಿಷಯದಲ್ಲಿ ಸಾಕ್ಷಿ ಕೊಡುತ್ತವೆ" (ಯೆಶಾಯ 5:39).

ಆದ್ದರಿಂದ ಯಾಕೋಬನು ಬರೆದು, "ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎದೆಗೂಡಿಸಿ; ಅದು ನಿಮ್ಮ ಆತ್ಮಗಳನ್ನು ರಕ್ಷಿಸುತ್ತದೆ" (ಯಾಕೋಬ 1:21). "ಪೌಲನೂ ಸಹ ಆ ಗ್ರಂಥಗಳು ... ರಕ್ಷಣೆ ಹೊಂದಿಸುವ ಜ್ಞಾನವನ್ನು ನೀಡುತ್ತವೆ" (2 ತಿಮೋಥೆ 3:15) ಎಂದಿರುವನು. ಪರಲೋಕದ ನಕ್ಷತ್ರವನ್ನು ದೇವರು ನಿಮಗೆ ನೀಡದೆ ಇರಬಹುದು. ಆದರೆ ಪರಲೋಕ ಸಂಗತಿಗಳನ್ನು ಗ್ರಹಿಸುವಂಥ ಗ್ರಂಥಗಳನ್ನು ನೀಡಿರುವನು - ದಾವೀದನು ವಾಕ್ಯವನ್ನು ಕುರಿತು, "ನಿನ್ನ ವಾಕ್ಯವು ಕಾಲಿಗೆ ದೀಪ, ಮಾರ್ಗಕ್ಕೆ ಬೆಳಕು" (ಕೀರ್ತನೆ 119:105) ಎಂದಿರುವನು.

ಜೋಯಿಸರಂತೆ ನಾವುಗಳು ವಿವೇಕಿಗಳಾದರೆ, ವಾಕ್ಯವನ್ನು ಓದಿ, ಅದರಂತೆ ಮಾಡ ಬೇಕು ಕರ್ತನ ಬಳಿಗೆ ಹೋಗುವ ಮಾರ್ಗದ ಕುರಿತು ಹೊಸ ಒಡಂಬಡಿಕೆಯು ನಮಗೆ ತಿಳಿಸುತ್ತದೆ. ನಾವು ಯೇಸುವನ್ನು ನಂಬಬೇಕು; ಯೇಸುವಿನಲ್ಲಿ ವಿಶ್ವಾಸ ಪ್ರಮಾಣ ಮಾಡ ಬೇಕು (ಯೋಹಾನ 3:16); ಪಾಪಿಗಳಿಗಾಗಿ ಮಾನಸಾಂತರ ಪಡಬೇಕು (ಲೂಕ 13:3); (ಮತ್ತಾಯ 10:32); ನಾವು (ಮುಳುಗಿಸುವ) ದೀಕ್ಷಾಸ್ನಾನ ಹೊಂದಬೇಕು (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38). ದೀಕ್ಷಾಸ್ನಾನವು ನಮ್ಮನ್ನು "ಕ್ರಿಸ್ತನಲ್ಲಿ" ಸೇರಿಸುತ್ತದೆ. ಎಂದು ಸತ್ಯವೇದ ತಿಳಿಸುತ್ತದೆ (ರೋಮಾಪುರ 6:3; ಗಲಾತ್ಯ 3:27) - ಮತ್ತು ಕ್ರಿಸ್ತನ ಸಂಗಡ ಇರುವದೇ ನಮ್ಮ ಗುರಿ! ಯೇಸುವಿನ ಮನೆಯಲ್ಲಿರುವದೇ ನಮ್ಮ ಉದ್ದೇಶ!

## ಅವರು ಯೇಸುವನ್ನು ಕಂಡುಕೊಂಡರು (ವಚನಗಳು 7-11)

ಜೋಯಿಸರು ಯೇಸುವನ್ನು ಕಂಡುಕೊಂಡರು. ನೀವು ಕಳಕೊಂಡಿರುವ ಬೀಗದ ಕೈಗಳಲ್ಲಿ ಅಥವಾ ನೀವು ಸೇರಬೇಕಾದ ಸ್ಥಳವನ್ನು ಕಂಡುಕೊಳ್ಳುವದು, ಸಂತೋಷಕರವಾದದ್ದೇ.[17] ರಕ್ಷಕನನ್ನು ಪಡಕೊಳ್ಳುವಾಗ ದೊರೆಯುವ ಆನಂದವನ್ನು ಹೋಲಿಸಲಾಗದು!

ಕ್ರಿಸ್ತನ ಜನನದ ಬಹಳ ಹಿಂದಿನ ಕಾಲದಲ್ಲೆ, ದಾವೀದನು ತನ್ನ ಮಗನಾದ ಸೋಲೋಮೋನನಿಗೆ, "ನೀನು ಆತನನ್ನು ಹಡುಕುವದಾದರೆ ಆತನನ್ನು ಕಂಡು ಕೊಳ್ಳುವಿ" (1 ಪೂರ್ವಕಾಲವೃತ್ತಾಂತ 28:9) ಎಂದು ಹೇಳಿದ್ದನು. ಜೋಯಿಸರು ಸರಿಯಾದ ಮನೋಭಾವದಿಂದ, ಸರಿಯಾದ ಮಾರ್ಗದಲ್ಲಿ ಹೋಗಿ ಯೇಸುವನ್ನು ಕಂಡುಕೊಂಡರು, ದೇವರು ಅದನ್ನು ಸಾರ್ಥಕ ಮಾಡಿದನು.

ಮೆಸ್ಸೀಯನು ಹುಟ್ಟಬೇಕಾದ ಸ್ಥಳದ ವಿಶ್ವಾಸವನ್ನು ಪಡೆದ ತಕ್ಷಣ, ಅವರು ಆತನನ್ನು ಹುಡುಕಲು ಹೊರಟರು (ವಚನಗಳು 7-9ಎ). ಅವರು ಯೆರೂಸಲೇಮಿನಿಂದ ಐದು ಮೈಲುಗಳ ಪ್ರಯಾಣ ಮಾಡಿದಾಗ, ಪುನಃ ಆ ನಕ್ಷತ್ರವನ್ನು ಕಂಡರು.[18] "ಅವರು ನಕ್ಷತ್ರವನ್ನು ಕಂಡು ಅತ್ಯಂತ ಸಂತೋಷಪಟ್ಟರು" (ವಚನ 10). ಅವರು ಸರಿಯಾದ ಮಾರ್ಗದಲ್ಲಿದ್ದರು ಎಂಬುದನ್ನು ಅರಿತಿದ್ದರು. ಆ ನಕ್ಷತ್ರವು ಅವರ ಮುಂದೆ ಮುಂದೆ ನಡೆದು ಕೂಸು ಇದ್ದ ಸ್ಥಳದ ಮೇಲೆ ಬಂದು ನಿಂತಿತು (ವಚನ 9). "ಅವರು ಆ ಮನೆಯೊಳಗೆ ಹೋಗಿ ಆ ಕೂಸನ್ನು ಅದರ ತಾಯಿಯಾದ ಮರಿಯಳ ಸಂಗಡ ಕಂಡರು" (ವಚನ 11ಎ).

ಅವರು ಬಹಳ ದಿನದಿಂದ ಯಾರಿಗಾಗಿ ಹುಡುಕುತ್ತಿದ್ದರೋ, ಆತನನ್ನು ಕಂಡಾಗ ಅವರು ಎಷ್ಟು ಆನಂದ ಪಟ್ಟಿರಬಹುದೆಂದು ಊಹಿಸಿರಿ. ಹಲವಾರು ವರ್ಷಗಳ ಹಿಂದೆ ಜನರು

ಹೊಸದನ್ನು ಕಂಡುಹಿಡಿದಾಗ, "ಯುರೇಕಾ" ಎಂದು ಉದ್ಗರಿಸಿದರು (ನಾನು ಕಂಡು ಹಿಡಿದೆ ಎಂಬ ಗ್ರೀಕ್ ಹೇಳಿಕೆ). ಜೋಯಿಸರು ಉದ್ಘರಿಸಿರಬಹುದಾದ ಅಂಶವನ್ನು ನಾನು ಅರಿಯೆನು. ಆದರೆ ಕೂಸನ್ನು ಮರಿಯಳ ಸಂಗಡ ಕಂಡಾಗ, ಅವರು ತಮಮ ಕಠಿಣವಾದ ಪ್ರಯಾಣವನ್ನ ಮರೆತು ಅಥವಾ ತಮ್ಮ ತ್ಯಾಗವನ್ನು ನೆನಪಿಗೆ ತಾರದೆ ಇರಬಹುದು. ತಮ್ಮಗಳ ಉದ್ದೇಶ ಈಡೇರಿಸಿದ್ದಾಗಿ ಆನಂದಗೊಂಡಿರಬಹುದು.

ಯೋಗ್ಯವಾದ ಮನೋಭಾವದಿಂದ ರಕ್ಷಕನನ್ನು ಹುಡುಕಲು ಯತ್ನಿಸಿದರೆ, ಅದನ್ನು ಪಡಕೊಳ್ಳಲು ದೇವರು ಸಹಾಯಿಸುವನು. ನಂತರ ನೀವು ದೀಕ್ಷಾಸ್ನಾನ ಮಾಡಿಸಿಕೊಂಡರೆ, ಫಿಲಿಪ್ಪನು ಹೇಳಿದಂತೆ, "ಫಿಲಿಪ್ಪನು ನತಾನಯೇಲನನ್ನು ಕಂಡು ಕೊಂಡು ಅವನಿಗೆ - ಯಾವನ ವಿಷಯವಾಗಿ ಮೋಶೆಯು ಧರ್ಮಶಾಸ್ತ್ರದಲ್ಲಿ ಬರೆದನೋ ಮತ್ತು ಪ್ರವಾದಿಗಳು ಬರೆದರೋ, ಆತನು ನಮಗೆ ಸಿಕ್ಕಿದನು; ಆತನು ಯಾರಂದರೆ ಯೋಸೇಫನ ಮಗನಾದ ನಜರೇತಿನ ಯೇಸು ಎಂದು ಹೇಳಿದನು" (ಯೋಹಾನ 1:45). "ಆತ್ಮರಕ್ಷಣೆಯನ್ನು ಹೊಂದುವವರಾಗಿ ಹೇಳಲಶಕ್ಯವಾದಂಥ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೀರಿ" (ಪೇತ್ರ 1:8)!

## ಅವರು ಯೇಸುವನ್ನು ಆರಾಧಿಸಿದರು (ವಚನಗಳು 2, 11)

ಅವರು ಯೇಸುವನ್ನು ಕಂಡು ಸಾಷ್ಟಾಂಗ ನಮಸ್ಕಾರ ಮಾಡಿದರು. ಅವರು ಯೆಹೂದ್ಯರ ಅರಸನನ್ನು ಕಂಡೆವೆಂದು ಹೆಚ್ಚಪಡದೆ, ಅವರು *ಆರಾಧಿಸಲು* ಯೆರೂಸಲೇಮಿಗೆ ಬಂದರು (ವಚನ 2; ಒತ್ತಿ ಹೇಳಿದ್ದು ನನ್ನದು). "ಅವರು ಆತನನ್ನು ಕಂಡು ಸಾಷ್ಟಾಂಗ ನಮಸ್ಕಾರ ಮಾಡಿದರು" (ವಚನ 11ಬಿ). ಅರಸನಿಗೆ ನೀಡಬೇಕಾದ ಗೌರವವನ್ನು ಸಲ್ಲಿಸಿದರು (ಪ್ರಕಟನೆ 19:16).[19]

ಅವರು ಸಾಷ್ಟಾಂಗ ಮಾಡುವ ಮೊದಲು "ತಮ್ಮ ಗಂಟುಗಳನ್ನು ಬಿಚ್ಚಿ, ಅದಕ್ಕೆ ಚಿನ್ನ ದೂಪ, ರಕ್ತ ಬೋಳಗಳನ್ನು ಕಾಣಿಕೆಯಾಗಿ ಕೊಟ್ಟರು" (ಮತ್ತಾ 2:11ಸಿ).[20] ಇದರಲ್ಲಿ ಕೆಲವು ಗುರುತರ ಸಂಕೇತಗಳಿವೆ: ಚಿನ್ನ ರಾಜನಿಗೆ ಸಂಬಂಧ ಪಟ್ಟದ್ದಾಗಿದೆ.[21] "ದೂಪ" ಯಾಜಕನಿಗೆ ಸಂಬಂಧಪಟ್ಟಿದೆ. ಮೃತ ದೇಹದ ಸಂರಕ್ಷಣೆಗಾಗಿ ರಕ್ತ ದೋಳವನ್ನು ಉಪಯೋಗಿಸಿ ದಂತೆ (ಯೋಹಾನ 19:39). ಅದು ರಕ್ಷಕನಿಗೆ ಮೀಸಲಾದ ಬಹುಮಾನ, ಆತನು ನಮ್ಮ ಪಾಪಗಳಿಗಾಗಿ ಮೃತಪಟ್ಟನು. ಯೇಸು; ಅರಸನು ಯಾಜಕನೂ, ಹಾಗೂ ರಕ್ಷಕನೂ ಆಗಿರುವನು. ಅವುಗಳು ಬಹುಬೆಲೆಬಾಳುವ ವಸ್ತುಗಳಾಗಿದ್ದು, *ಸಾಗಾಟಕ್ಕೆ* ಹಗುರವಾಗಿದ್ದವು ಆದ್ದರಿಂದ ಅವುಗಳನ್ನು ಅವರು ತಂದರು.[22]

ಅವರು ತಂದ ಕಾಣಿಕೆಗಳು ಅವರು ಎಂಥವರು ಎಂದಿರದೆ, ಅವರ ಮೂಲವನ್ನು ತೋರಿ ಸಿತು: ಆವರು ತಮ್ಮ ಅರಸನಿಗೆ ಸನ್ಮಾನ ಮಾಡಿದರು. ಕೊಡುವದನ್ನೂ ಆರಾಧನೆಯನ್ನು ವಿಭಜನೆ ಮಾಡಲು ಸಾಧ್ಯವಿಲ್ಲ.[23] ಹಳೆ ಒಡಂಬಡಿಕೆಯ ಯಜ್ಞಗಳನ್ನು ಒಳಗೊಂಡಿದ್ದರೆ, ವಾರದ ಮೊದಲನೆಯ ದಿನದಲ್ಲಿ ಉದಾರವಾದ ಕಾಣಿಕೆಗಳನ್ನು ಪಡೆದರು ಎಂದು ಹೊಸ ಒಡಂಬಡಿಕೆ ತಿಳಿಸುತ್ತದೆ (1 ಕೊರಿಂಥ 16:1, 2; 2 ಕೊರಿಂಥ 9:7). ಕೆಲವು ಸಾರಿ ಆರಾಧ ನೆಯ ಸಮಯದಲ್ಲಿ ಶಬ್ದವು ಹೆಚ್ಚಾಗಿ, ಕಾಣಿಕೆ ನೀಡುವದನ್ನು ಕೆಲವರು ಮರೆತು ಬಿಡುತ್ತಾರೆ - ಆದರೆ ಅದು ಒಳಿತಾಗಿರುವದಿಲ್ಲ.

ನಿನ್ನ ಬಳಿಯಲ್ಲಿ ಕರ್ತನಿಗೆ ನೀಡಲು, ಚಿನ್ನವಾಗಲೀ, ದೂಪ ಅಥವಾ ರಕ್ತ ಬೋಳಗಳು ಇರದಿದ್ದರೂ, ನಿನ್ನಲ್ಲಿರುವ ಉತ್ತಮವಾದದ್ದನ್ನು ಆತನಿಗೆ ನೀಡು, ಮೊದಲು ನಿನ್ನನ್ನೇ ಆತನಿಗೆ ಅರ್ಪಿಸು (2 ಕೊರಿಂಥ 8:5; ನೋಡಿರಿ ರೋಮಾಪುರ 12:1, 2); ನಂತರ ನಿನ್ನದನ್ನು, ಹಾಗೂ ನಿನ್ನಲ್ಲಿರುವ ಉತ್ತಮವಾದದ್ದನ್ನೇ ನೀಡು, ಬೆಲೆ ಇಲ್ಲದಿರುವದನ್ನು ನಾನು ಕರ್ತನಿಗೆ ನೀಡುವದಿಲ್ಲ ಎಂದು (2 ಸಮುವೇಲ 24:24).

ಯೇಸುವಿನ ಸುತ್ತ ನೆರೆದಿದ್ದ ಜೋಯಿಸರು ಆತನನ್ನು ಆರಾಧಿಸಿ, ಕಾಣಿಕೆಗಳನ್ನು

ಸಮರ್ಪಿಸಿದರು. ನೀವು ಅವರಂತೆ ಮಾಡಿರುವಿರಾ?[24]

## ಮುಕ್ತಾಯ (ವಚನಗಳು 10, 12)

ಜೋಯಿಸರ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಇರುವದಿಲ್ಲ. ಅವರು ಯೆರೂಸಲೇಮಿಗೆ ಬರುವ ಮೊದಲು ಅವರ ಕುರಿತಾದ ವಿಚಾರಗಳು ತಿಳಿದಿರುವದಿಲ್ಲ. ಅವರು ಹಿಂದಿರುಗಿದ ನಂತರವೂ ಅವರ ವಿಚಾರಗಳು ತಿಳಿದಿರುವದಿಲ್ಲ. ಅವನ್ನು ನೆನಪಿಡುವಂಥ ಸಂದರ್ಭವನ್ನು ಸತ್ಯವೇದದಲ್ಲಿ ದಾಖಲಿಸಲಾಗಿದೆ. ಆದರೆ ಒಂದು ಗಣನೀಯ ಸಂಗತಿ: ಅವರು ಕರ್ತನನ್ನು ಹುಡುಕಿ ಧನ್ಯರಾದರು. ವಚನ 10ನ್ನು ನೆನಪು ಮಾಡಿರಿ: "ಅವರು ನಕ್ಷತ್ರವನ್ನು ಕಂಡು ಅತ್ಯಂತ್ರ ಸಂತೋಷಪಟ್ಟರು" ಅವರು ಸಂತೋಷದಿಂದ ಆನಂದಿಸಿದರು ಎಂದು ಮೂಲ ಬರವಣಿಗೆಯಲ್ಲಿದೆ. ಸಂತೋಷದ ಕುರಿತು ಇಬ್ರಿಯ ಶೈಲಿಯಲ್ಲಿ ಬರೆಯಲಾಗಿದೆ. ಅವರ, ಸಂತೋಷದ ಕುರಿತು ಅರಿಯುವದು ಮಾತ್ರವಲ್ಲದೆ, ಅವರು "ಅತಿ ಆನಂದ" ಪಟ್ಟರು ಅವರು "ಕರ್ತನನ್ನು ಕಂಡುಕೊಂಡದ್ದಕ್ಕಾಗಿ ಆನಂದಿಸಿದರು." ಅವರೂ ಸಹ ಕುರುಬರು ಮಾಡಿದ ಹಾಗೆಯೇ, ಬೆತ್ಲೆಹೇಮಿನಿಂದ ಪ್ರಯಾಣ ಮಾಡಿದ ಮಾರ್ಗದಲ್ಲಿರುವವರಿಗೆಲ್ಲ (ಲೂಕ 2:17, 18). ಆ ಚಿಕ್ಕ ಅರಸನ ಬಗ್ಗೆ ಪ್ರಕಟಿಸಿರಬಹುದು.

ನೀನು ರಕ್ಷಕನನ್ನು ಹುಡುಕಿ, ಆತನನ್ನು ಹೊಂದಿಕೊಳ್ಳುವಾಗ, ಧನ್ಯನಾಗುವಿ. ಊಹಿಸಲಾರದ ಆನಂದವನ್ನು ಹೊಂದುವಿ. ಪೌಲನು ಬರೆದು: "ಕರ್ತನು ಯೌವನ ಪಾಪಗಳನ್ನು ಲೆಕ್ಕಕ್ಕೆ ತರುವದಿಲ್ಲವೋ, ಅವನೇ ... ಧನ್ಯನು" (ರೋಮಾಪುರ 4:7) ಎಂದಿರುವನು. "ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ; ಆದರೆ ಬರೆದಿರುವ ಪ್ರಕಾರ - ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ" (1 ಕೊರಿಂಥ 2:9).

ಈ ಅಧ್ಯಯನದಲ್ಲಿ ಮೂರು ಗುಂಪುಗಳಿವೆ. ಕ್ರಿಸ್ತನನ್ನು ಹುಡುಕಿ, ಆರಾಧಿಸಿದ ಜೋಯಿಸಕ ಗುಂಪು. ಯೇಸುವನ್ನು ಕೊಲ್ಲಲು ಯತ್ನಿಸಿದ ಯೆರೋದನ ಗುಂಪು. ಕೆಲವೇ ಮೈಲುಗಳ ಅಂತರದಲ್ಲಿದ್ದ ಯೇಸುವನ್ನು ಹುಡುಕಲಾಗದ ಧಾರ್ಮಿಕ ಗುಂಪು. ಇಂತಹ ಗುಂಪುನವರು ಈಗನ ದಿವಸಗಳಲ್ಲೂ ನಮ್ಮ ಮಧ್ಯದಲ್ಲಿದ್ದಾರೆ: ಸ್ವಾರ್ಥಿಗಳಿಗೆ ಮುಳ್ಳಾಗಿರುವ ಕ್ರಿಸ್ತನನ್ನು ದ್ವೇಷಿಸುವವರೂ ಇದ್ದಾರೆ. ಇಂತಹ ಜನರು ಹೇಗೆ ಆಶೀರ್ವಾದಕ್ಕೆ ಪಾತ್ರರಾಗಲು ಹುಡುಕುತ್ತಿರುವ ಕೆಲವರು ಇನ್ನು ಇದ್ದಾರೆ. ಅವರಿಗಾಗಿ ದೇವರಿಗೆ ಸ್ತೋತ್ರ. ಅವರೊಂದಿಗೆ ನೀವುಗಳು ಸೇರಿರುವಿರಾ.[25]

---

ಟಿಪ್ಪಣೆಗಳು

[1]ದೇವರನ್ನು ಹುಡುಕುವ ಕುರಿತ ಅನೇಕ ವಾಕ್ಯಭಾಗಗಳಿವೆ. ಮೊದಲನೆಯದಾಗಿ, ಸೂಚಿಸಲ್ಪಟ್ಟವುಗಳಿಗೆ ಜೊತೆ ನನ್ನ ದೃಷ್ಟಿಗೆ ಬಂದವುಗಳು: ಎಜ್ರ 8:22; ಕೀರ್ತನೆ 10:4; 14:2. [2]ನಾನು ಇದನ್ನು ಪ್ರಸಂಗಿಸುವಾಗ "ಹೆಚ್ಚಿನ ಸಮಯವನ್ನು ಈ ಅಂಶದಲ್ಲಿಯೇ ಬೋಧಿ ಸುತ್ತೇನೆ ಅಥವಾ ಕಲಿಯುತ್ತೇನೆ. ನಾನು ಹದಿನೈದು ಅಥವಾ ಇಪ್ಪತು ನಿಮಿಷ ತೆಗೆದುಕೊಂಡಲ್ಲಿ ಗಾಬರಿಯಾಗಬೇಡಿ. ಮತ್ತು ನಾನು ಇನ್ನುಎರಡನೆಯ ವಿಷಯಕ್ಕೆ ಹೋಗಲಿಲ್ಲ!" [3]ಕಥೆ ನಿನ್ನ ಕೇಳುಗರಿಗೆ ಅರ್ಥವಾಗದಿದ್ದರೆ ಸ್ವಲ್ಪ ಹೆಚ್ಚಿನ ಸಮಯವನ್ನು ತೆಗೆದುಕೊಂಡು ಅದನ್ನು ಮತ್ತೆ ಹೇಳಿ. [4]Gene Cloer, "ರಾಜನನ್ನು ಆಹ್ವಾನಿಸು" ಎಂಬ ಪಾಠದಲ್ಲಿ ಜ್ಞಾನಿಗಳು ಏನು ಮಾಡಿದರೋ ಹೇಳಿ, ಪ್ರತಿ ಅಂಶದ ಕೊನೆಯಲ್ಲಿ "ನಾವು ಅವನಿಗಿಂತ ಜ್ಞಾನವಂತರೇ?" ಎಂದು ಕೇಳಿದರು ("ಮತ್ತಾಯನು: ರಾಜನನ್ನು ಪರಿಚಯ ಮಾಡುವುದು," *Truth for Today* [July 1989]: 6-8). [5]ಭೌತಿಕ ಶೂನ್ಯತೆಯನ್ನು ಪ್ರಕೃತಿ ದ್ವೇಷಿಸಿದನ್ನು ಅವಸರ ಪಡುತ್ತದೆ. ಮನುಷ್ಯರು ಸಮಾಚಾರ ಶೂನ್ಯತೆಯನ್ನು ದ್ವೇಷಿಸುತ್ತಾರೆ.

ಅವರು ಜ್ಞಾನದಿಂದ ಅದನ್ನು ತುಂಬಿಸಿಕೊಳ್ಳದೆ ಇರುವುದರಿಂದ ಊಹೆಗಳಿಂದ ಅದನ್ನು ತುಂಬಿಸುತ್ತಾರೆ. ಆದ್ದರಿಂದ ಏಳನೇಯ ಶತಮಾನದ ಪುರಾಣವು - ಮೂವರು ಜ್ಞಾನಿಗಳ ಹೆಸರು, ಅವರು ಬಂದ ದೇಶ, ಅವರು ಕೊಟ್ಟ ಕಾಣಿಕೆ, ಯಾರು ಏನು ಕೊಟ್ಟರು ತಿಳಿಸಿದೆ. [6]ಜ್ಞಾನಿಗಳ ಕುರಿತ ಇನ್ನು ಹೆಚ್ಚಿನ ವಿವರಗಳಿಗೆ "ನಮಗಾಗಿ ಒಂದು ಮಗು ಜನಿಸಿದೆ" ಎನ್ನುವ ಪಾಠದಲ್ಲಿನ ಸೂಚನೆಗಳನ್ನು ನೋಡಿ. [7]ಪ್ರಾಚೀನ ಸಮಾಧಿ ಚಿತ್ರಲೇಖನ ಇಬ್ಬರು ಜ್ಞಾನಿಗಳು ಚಿತ್ರಿಸಿದ್ದು, ಆದರೆ ದೈವ ಪ್ರೇರಿತ ವಲ್ಲದ ಸಭೆ ಪಾರಂಪರೆ ಹನ್ನೆರಡು ಜ್ಞಾನಿಗಳನ್ನು ಸೂಚಿಸಿದೆ. [8]ಮೆಸ್ಸೀಯನ ಅಂದರೆ ಕ್ರಿಸ್ತನು ಸಕಲ ಜನಗಳನ್ನು ಆಶೀರ್ವಾದಿಸುವನೆಂಬ ವಾಸ್ತವನ್ನು ಕುರಿತು ಯೆಶಾಯ 42:1, 6; 49:6, 22; ಮತ್ತಾಯ 12:18-21 ನೋಡಿ. [9]ಅಪೊಸ್ತಲರ ಕೃತ್ಯಗಳು 2:9 ಪಾಲೇಸ್ತೇನಿನಲ್ಲಿ ಪೂರ್ವ ಪ್ರಾಂತ್ಯದಲ್ಲಿರುವ ಯೆಹೂದ್ಯರನ್ನು ಪ್ರಸ್ತಾಪಿಸಿದೆ. [10]ಜೋಸಿಪಸ್ ಪ್ರಕಾರ, ಲೋಕವನ್ನು ಆಳುವ ರಾಜ ಯೆಹೂದ್ಯರೊಳಗಿಂದ ಬರುತ್ತಾನೆ ಎಂಬ ಭಾವನೆ (ಸ್ವಲ್ಪ ಮಟ್ಟಿಗೆ) ಜನಗಳ ಮಧ್ಯ ವಾಪಿಸಿತು. ಮತ್ತಾಯ 23:15 ಯೆಹೂದ್ಯರ ಮತ ಬದಲಾವಣೆ ಕಾರ್ಯ ಹೇಳಲಿಲ್ಲ.

[11]ಊಹೆಯಲ್ಲಿ, ಗ್ರಹಗಳ ಲೆಕ್ಕಗಳು, ಉಲ್ಕೆಗಳು ಇತ್ಯಾದಿಗಳು ಇವೆ. ಇದರಲ್ಲಿ ಯಾವುದು ಲೇಖನದಲ್ಲಿರುವ ನಕ್ಷತ್ರಗಳಲ್ಲಿ ಅದರ ಕೆಲಸಕ್ಕಾಗಲಿ ಸಂಬಂಧಪಟ್ಟಿಲ್ಲ. [12]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 42. [13]ದೇವರನ್ನು ಮೆಚ್ಚಿಸಲು ದೀನರಾಗಿರಬೇಕು ಎನ್ನುವ ಲೇಖನ ಭಾಗಗಳಲ್ಲಿ ಯಾಕೋಬ 4:6 ಮತ್ತು 1 ಪೇತ್ರ 5:5ರಲ್ಲಿ ಸಹ ಇದೆ. [14]ಪಾಲೆಸ್ತಿನಿನಲ್ಲಿರುವ ಮತ್ತೊಂದು ಬೆತ್ಲೆಹೇಮ್‌ನಿಂದ ಇದನ್ನು ಬೇರೆ ಮಾಡುವುದಕ್ಕೆ "ಯೆಹೂದ್ಯರಲ್ಲಿ" ಎನ್ನುವ ಪ್ರಯೋಗ ಬರೆತು ಹೋಗಿವೆ (ಯೆಹೋಶುವ 19:15, 16; ನ್ಯಾಯಸ್ಥಾಪಕ 12:8, 10). [15]"ಬೆತ್ಲೆಹೇಮ್" ಅಂದರೆ "ರೊಟ್ಟಿಯ ಮನೆ" ಜೀವಕರವಾದ ರೊಟ್ಟಯ ಜನ್ಮ ಸ್ಥಳ. ಆ ಹೆಸರು ಅದಕ್ಕೆ ತಕ್ಕದಾಗಿದೆ (ಯೋಹಾನ 6:48). [16]ಫರಿಸಾಯರು ಹಾಗೂ ಸದ್ದುಕಾಯರು ಸಹ 2 ಸಮುವೇಲ 5:2ರಲ್ಲಿ ಪ್ರಯೋಗ ಮಾಡಿದ್ದಾರೆ. [17]ಲೂಕ 15ರಲ್ಲಿ, ಕುರುಬನು ಮತ್ತು ಸ್ತ್ರೀ ಕಳೆದು ಹೊದದ್ದನ್ನು ತಿರುಗಿ ಹೊಂದಿದ್ದಾಗ ಉಂಟಾದ ಸಂತೋಷವನ್ನು ತಿಳಿಸುತ್ತದೆ. ನಿನಗೆ ತಿಳಿದಿರುವ ವೈಯಕ್ತಿಕ ಉದಾಹರಣೆಯನ್ನು ಕೊಡಬಹುದು. [18]ಲೇಖನಗಳಲ್ಲಿ ಗುಪ್ತವಾಗಿದೆ. ಆ ನಕ್ಷತ್ರವನ್ನು ಕುರಿತು ನಮಗೆ ಹೆಚ್ಚಾಗಿ ತಿಳಿಯದು - ಅದು ಪ್ರತಿ ರಾತ್ರಿ ಕಾಣಿಸುತ್ತದೆಯೋ ಅಥವಾ ಆಗಾಗ್ಗೆ ಕಾಣಿಸುತ್ತದೆಯೋ ಸಹ ತಿಳಿಯದು. [19]"ಆರಾಧನೆ" ಎಂದು ಭಾಷಾಂತರ ಮಾಡಲ್ಪಟ್ಟದ್ದು ದೇವರಿಗಾಗಿ ಅಥವಾ ಮನುಷ್ಯರಿಗೆ ಕೊಡುವ ಗೌರವವನ್ನು ಸೂಚಸುತ್ತದೆ. ಆದ್ದರಿಂದ ಜ್ಞಾನಿಗಳು ಯೇಸುವನ್ನು ದೇವರನ್ನಾಗಿ ಆರಾಧಿಸಿ ದರು ಅಥವಾ ಕೇವಲ ಒಬ್ಬ ರಾಜರನ್ನಾಗಿ ಗುರುತಿಸಿದರು. "ದೇವರ ಬಗ್ಗೆ ತೋರುವ ಗೌರ" ಎನ್ನುವ ಭಾವದಿಂದ ಮತ್ತಾಯನು "ಆರಾಧಿಸುವುದು" ಎನ್ನುವ ಪದವನ್ನು ಉಪಯೋಗಿಸಿರುತ್ತಾರೆ - ಇಲ್ಲಿ ಅಂತಹ ಭಾವದಿಂದಲೇ ಉಪಯೋಗಿಸಲಾಗಿದೆ. [20]ಆ ಮೂರು ಕಾಣಿಕೆಗಳನ್ನು ಕುರಿತ ಹೆಚ್ಚಿನ ವಿವರಗಳಿಗೆ "ನಮಗಾಗಿ ಒಂದು ಮಗು ಜನಿಸಿತು" ಎನ್ನುವ ಪಾಠದಲ್ಲಿ ನೋಡಿ.

[21]ಪ್ರತ್ಯಕ್ಷ ಗುಡಾರ ಸಂಬಂಧವಾದ ರೂಪದಲ್ಲಿ ಸಾಂಬ್ರಾಣಿ ಒಂದು ಭಾಗವಾಗಿದೆ (ವಿಮೋಚನಕಾಂಡ 30:34-38). [22]ದೇವರು ಕಡಾಕ್ಷದಲ್ಲಿ, ಈ ಕಾಣಿಕೆಗಳನ್ನು ಸುಲಭವಾಗಿ ಯೋಸೇಫನನು ಕಳುಹಿಸುವ ಅಥವಾ ತೆಗೆದುಕೊಂಡು ಹೋಗುವ ಅವಕಾಶವಿದೆ. [23]ಆರಾಧನೆ ಮಾಡದೇ ಕೊಡಬಹುದು ಆದರೆ ಕೊಡದೇ ಒಬ್ಬನು ಆರಾಧಿಸುವುದಿಲ್ಲ ಎಂದು ಒಬ್ಬ ವ್ಯಕ್ತಿ ಹೇಳಿದ್ದಾನೆ. ಯಾಕೆಂದರೆ ನಿನ್ನ ಪ್ರಾಣ, ಆತ್ಮ ಹೃದಯವನ್ನು ದೇವರಿಗೆ ಸ್ತುತಿಸುವುದಕ್ಕೆ ಸಮರ್ಪಿಸಬೇಕು. [24]ದೇವರು ಜ್ಞಾನಿಗಳನ್ನು ಹೇಗೆ ಎಚ್ಚರಿಸಿದ್ದಾನೋ, ಮತ್ತೊಂದು ಮಾರ್ಗದಲ್ಲಿ ಅವರು ಯಾವ ರೀತಿ ಯಲ್ಲಿ ತಿರಿಗಿ ಹೋದರು ಎಂಬ ವಿಷಯಗಳನ್ನು ಅದರ ಹಿಂದೆ ನಡೆದ ಕಾರ್ಯಗಳನ್ನು ನೀನು ಪ್ರಸ್ತಾಪಿಸಲು ಕೋರಬಹುದು (ಮತ್ತಾಯ 2:12), ಕೆಲವು ಸುವಾರ್ತಿಕರು ಇನ್ನು ಸ್ವಲ್ಪ ಹೆಚ್ಚಿನ ಬೆಳವಣಿಗೆಗೆ ಪ್ರಯತ್ನಿಸಿರಬಹುದು: ಕ್ರಿಸ್ತನನ್ನು ದರ್ಶಿಸಿದ ಮೇಲೆ ಜ್ಞಾನಿಗಳು ಮತ್ತೊಂದು ಮಾರ್ಗದಿಂದ ಹೋದ ಹಾಗೆ (ಮತ್ತಾಯ 2:12), ಕ್ರೈಸ್ತವರಾದ ನಂತರ ನಾವು ಸಹ ಮತ್ತೊಂದು ಮಾರ್ಗದಿಂದ ಹೋಗಬೇಕು. ಅಂದರೆ ಮತ್ತೊಂದು ವಿಧವಾದ ಹೊಸ ಜೀವಿತವನ್ನು ಜೀವಿಸಬೇಕು. [25]ಈ ಪ್ರಸಂಗವನ್ನು ನೀನು ಉಪಯೋಗಿಸಿದಾಗ ಕ್ರೈಸ್ತವನು ಬದಲಾವಣೆಯಾಗುವುದಕ್ಕೆ ಒಬ್ಬನು ಏನು ಮಾಡಬೇಕು ನೀವು ಮಾಡಲು ಒಪ್ಪಬಹುದು. ಎಷ್ಟು ಬೇಗನೇ ಬಿಡುವಿದ್ದರೆ, ಅಷ್ಟು ಬೇಗನೇ ಕರ್ತನಿಗೆ ಒಳಗಾಗುವಂತೆ ವ್ಯಕ್ತಿಗಳನ್ನು ಪ್ರೋತ್ಸಾಹಿಸಬೇಕು. ಪ್ರಸಂಗಿಸುವ ಈ ವಿಧಾನವನ್ನು ಕುರಿತು ಕೇಳುವವರಲ್ಲಿ ಯಾರಿಗಾದರೂ ಪ್ರಶ್ನೆಗಳಿದ್ದರೆ, ಬೈಬಲ್ ಸಂಬಂಧಪಟ್ಟಿ ರಕ್ಷಕನಿಗೆ ಹುಡುಕುವುದರಲ್ಲಿ ಆ ಪ್ರಶ್ನೆಗಳನ್ನೂ ಹುಡುಕುವುದಕ್ಕೆ ನೀನು ಅವರಿಗೆ ಸಹಾಯಮಾಡಬಹುದು.


ಅಂತೋನಿಯನ
ಕೋಟೆ
ದೇವಾಲಯ
ಪಾಲೇಸ್ತೀನಿಯರ
ನ್ಯಾಯಲಯ
ಇಸ್ರಾಯೇಲ್ಯರ
ನ್ಯಾಯಲಯ
ಯಜ್ಞವೇದಿಕೆ
ಸುಂದರ
ದ್ವಾರ
ಮಹಿಳೆಯರ
ನ್ಯಾಯಲಯ
ಪರಿಶುದ್ಧ
ಪತಿಪರಿಶುದ್ಧ
ಪರಿಶುದ್ಧ
ಅರಮನೆ
ಸೋಲೋಮೋನನ
ಮುಖಮಂಟಪ
ಅನ್ಯಜನರ
ನ್ಯಾಯಾಲಯ